1


ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE: 24/5/20


# ನಾಳೆ ಬೆಳಗ್ಗೆ 7ರವರೆಗೆ ಕರ್ಫ್ಯೂ

24-5-2020

## ಅಗತ್ಯ ಸೇವೆ ಹೊರತುಪಡಿಸಿ ಅನಗತ್ಯವಾಗಿ ಹೊರಬಂದರೆ ಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಶನಿವಾರ ರಾತ್ರಿ 7 ಗಂಟೆಯಿಂದ ಕರೊನಾ ಕರ್ಫ್ಯೂ ಜಾರಿಯಲ್ಲಿದ್ದು, ಸೋಮವಾರ ಬೆಳಗ್ಗೆ 7 ಗಂಟೆವರೆಗೆ ಮುಂದುವರಿಯಲಿದೆ. ತುರ್ತು ಮತ್ತು ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದ ವಹಿವಾಟು ಸಂಪೂರ್ಣವಾಗಿ ಬಂದ್ ಇರಲಿದೆ. ರಾಜ್ಯ ಸರ್ಕಾರ ಮೇ 31ರವರೆಗೆ ಕರೊನಾ ಲಾಕ್‌ಡೌನ್ ಮುಂದುವರಿಸಿ ಬಹುತೇಕ ಸೇವೆಗಳಿಗೆ ನಿಯಮ ಸಡಿಲಿಕೆ ಮಾಡಿದೆ.

**» ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ**

**» ಶನಿವಾರ ರಾತ್ರಿ 7 ಗಂಟೆಯಿಂದಲೇ ಎಲ್ಲ ವಹಿವಾಟು ಬಂದ್**

ಆದರೆ, ಪ್ರತಿದಿನ ರಾತ್ರಿ 7 ರಿಂದ ಬೆಳಗ್ಗೆ 7 ವರೆಗೆ ಹಾಗೂ ಭಾನುವಾರ ಸಂಪೂರ್ಣ ಕರ್ಫ್ಯೂ ಜಾರಿಯಲ್ಲಿ ಇರಲಿದೆ ಎಂದು ಆದೇಶಿಸಿತ್ತು.

**ರಸ್ತೆಗಳಲ್ಲಿ ಬ್ಯಾರಿಕೇಡ್:** ರಾಷ್ಟ್ರೀಯ, ರಾಜ್ಯ ಹೆದ್ದಾರಿ ಮತ್ತು ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಪೊಲೀಸರು ಬಂದ್ ಮಾಡಿದ್ದಾರೆ. ಜಿಲ್ಲಾ ಗಡಿ ಮತ್ತು ಪ್ರಮುಖ ಜಂಕ್ಷನ್‌ಗಳಲ್ಲಿ ಪೊಲೀಸ್ ಕಾವಲು ಇರಲಿದೆ. ಪೂರ್ವನಿಗದಿತ ಮದುವೆ ಸಮಾರಂಭಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಧರ್ಮ, ರಾಜಕೀಯ ಸಭೆ ಸಮಾರಂಭಗಳನ್ನು ನಿರ್ಬಂಧಿಸಲಾಗಿದೆ. ಪಾರ್ಕ್ ಮತ್ತು ರಸ್ತೆಗಳಲ್ಲಿ ವಾಯು ವಿಹಾರ, ಶಾಪಿಂಗ್, ಸಂಬಂಧಿಕರ ಮನೆಗೆ ಸುತ್ತಾಡುವುದು ಎಲ್ಲವನ್ನು ಸರ್ಕಾರ ನಿರ್ಬಂಧಿಸಿದೆ.

**ದೇಶದ ಪ್ರಮುಖ ನಗರಗಳಲ್ಲಿ ಲಾಕ್‌ಡೌನ್ ಸ್ಥಿತಿಗತಿ ▶9**



ವಿಶೇಷ ರೈಲಿನಲ್ಲಿ ತಮ್ಮ ಊರಿಗೆ ತೆರಳಲು ಶನಿವಾರ ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್ ಬಳಿ ಹೆಸರು ನೋಂದಾಯಿಸಿಕೊಳ್ಳಲು ಮುಗಿಬಿದ್ದ ವಲಸೆ ಕಾರ್ಮಿಕರು.

### ಏನಿರಲ್ಲ?

- ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ರೈಲು, ಕ್ಯಾಬ್, ಟ್ಯಾಕ್ಸಿ, ಆಟೋ
- ಮದ್ಯದ ಅಂಗಡಿ, ಸಲೂನ್ ಶಾಪ್, ಮೆಕಾನಿಕ್ ಶಾಪ್
- ಮಾಲ್, ಸಿನಿಮಾ ಟಾಕೀಸ್, ಕೈಗಾರಿಕೆಗಳು ತೆರೆಯುವುದಿಲ್ಲ
- ಪಾರ್ಕ್‌ಗಳು, ವಾಣಿಜ್ಯ ಚಟುವಟಿಕೆ ಅಂಗಡಿಗಳು, ರಸ್ತೆಗಳೆಲ್ಲ ಬಂದ್
- ತುರ್ತು ಅಗತ್ಯಗಳಿಗೆ ಬಿಟ್ಟು ಖಾಸಗಿ ವಾಹನಗಳನ್ನು ಬಳಸುವಂತಿಲ್ಲ

### ಸುತ್ತಾಡಿದರೆ ವಾಹನ ಸೀಜ್

**ಲಾಕ್‌ಡೌನ್ ಸಡಿಲಿಕೆ** ಆದ ಬಳಿಕ ಮೊದಲ ಭಾನುವಾರವೆಂದು ಸುತ್ತಾಡಲು ಹೊರಬಂದರೆ ವಾಹನ ಜಪ್ತಿ ಮಾಡಿ, ಕೇಸ್ ದಾಖಲಿಸುತ್ತಾರೆ. ಸಂಚಾರಕ್ಕೆ ಯಾವುದೇ ಪಾಸ್ ಅನ್ವಯ ಆಗುವುದಿಲ್ಲ. ಕೇವಲ ತುರ್ತು ಮತ್ತು ಅಗತ್ಯ ಸೇವೆಗಳಿಗೆ ಅವಕಾಶ.

### ಏನಿರುತ್ತೆ?

- ಹಾಲು, ತರಕಾರಿ, ಔಷಧ ಅಂಗಡಿ
- ಮಾಂಸದ ಅಂಗಡಿ, ಹೋಟೆಲ್‌ನಲ್ಲಿ ಪಾರ್ಸಲ್
- ಆನ್‌ಲೈನ್ ತರಗತಿ, ಆಸ್ಪತ್ರೆ, ಕ್ಲಿನಿಕ್ ಎಂದಿನಂತೆ ಕಾರ್ಯ
- ಆಂಬುಲೆನ್ಸ್, ಪೊಲೀಸ್, ಮಾಧ್ಯಮಗಳ ಸೇವೆ